REGISTERED WITH RNI NEW DELHI REG. N0.69683/97-Postal Registration No.RNP/KA/BGS/2259/2024-2026
Office of Posting: Bangalore PSO, Bangalore - 560026.; Date of Posting & Publishing Every Wednesday; Price Rs. 2 (Pages-8)

ಪಟ್ಟಣ ಸಹಕಾರ ಬ್ಯಾಂಕುಗಳ

# ವಾರ್ತಾ ಪತ್ರಿಕೆ

ಕರ್ನಾಟಕ ರಾಜ್ಯ ಸಹಕಾರ ಪಟ್ಟಣ ಬ್ಯಾಂಕುಗಳ ಮಹಾಮಂಡಳದ ಅಧಿಕೃತ ಕನ್ನಡ ವಾರಪತ್ರಿಕೆ

ಸಂಪುಟ : 32 । ಸಂಚಿಕೆ : 37 । 17 ಡಿಸೆಂಬರ್ 2025 । ಬುಧವಾರ । ಪುಟಗಳು : 8 । ಬೆಲೆ : 2/-

## ಬ್ಯಾಂಕ್ ಟೆಕ್-ಎಕ್ಸ್ ಸಮ್ಮಿತ್-2025 ಸಮಾರಂಭದಲ್ಲಿ
## BEST URBAN CO-OPERATIVE BANK
## ರಾಷ್ಟ್ರೀಯ ಪ್ರಶಸ್ತಿಗಳಿಸಿದ ರಾಜ್ಯದ ಪಟ್ಟಣ ಸಹಕಾರ ಬ್ಯಾಂಕುಗಳು

**ಬೆಂಗಳೂರು :** ದಿನಾಂಕ 05–12–2025ರಂದು ಬೆಂಗಳೂರಿನ ಕ್ಯಾಪಿಟಲ್ ಹೋಟೆಲ್‌ನಲ್ಲಿ ಕರ್ನಾಟಕ ರಾಜ್ಯ ಪಟ್ಟಣ ಸಹಕಾರ ಬ್ಯಾಂಕುಗಳ ಮಹಾಮಂಡಳ ಹಾಗೂ ಭಾರತ ನೆಟ್‌ವರ್ಕ್ ಗ್ರೂಪ್ ಸಹಯೋಗದಲ್ಲಿ ನಡೆದ ಬ್ಯಾಂಕ್ ಟೆಕ್–ಎಕ್ಸ್ ಸಮ್ಮಿತ್–2025 ಸಮಾರಂಭವನ್ನು ಮಾನ್ಯ ಕಾನೂನು ಮತ್ತು ಸಂಸದೀಯ ವ್ಯವಹಾರಗಳು ಹಾಗೂ ಪ್ರವಾಸೋದ್ಯಮ ಸಚಿವರು ಮತ್ತು ಮಹಾಮಂಡಳದ ಅಧ್ಯಕ್ಷರಾದ ಶ್ರೀ ಎಚ್.ಕೆ. ಪಾಟೀಲ್‌ರವರು ಉದ್ಘಾಟಿಸಿದರು.

ಭಾರತ್ ನೆಟ್‌ವರ್ಕ್ ಗ್ರೂಪ್‌ನ ಮುಖ್ಯಸ್ಥರಾದ ಶ್ರೀ ಅನುಪಮ್ ಗುಪ್ತಾ, ಮಹಾಮಂಡಳದ ಮುಖ್ಯಕಾರ್ಯನಿರ್ವಹಣಾಧಿಕಾರಿಯಾದ ಶ್ರೀ ಪುಂಡಲೀಕ ಎನ್. ಕೆರೂರೆ ಉಪಸ್ಥಿತರಿದ್ದರು.

### ಉಡುಪಿ ಕೋ–ಆಪರೇಟಿವ್ ಟೌನ್ ಬ್ಯಾಂಕ್




ಉಡುಪಿ ಕೋ–ಆಪರೇಟಿವ್ ಟೌನ್ ಬ್ಯಾಂಕಿಗೆ Best Urban Co-operative Bank ರಾಷ್ಟ್ರೀಯ ಪ್ರಶಸ್ತಿಯನ್ನು ಬ್ಯಾಂಕಿನ ಅಧ್ಯಕ್ಷರಾದ ಶ್ರೀ ಎಚ್. ಜಯಪ್ರಕಾಶ್ ಕೆದ್ಲಾಯ ಹಾಗೂ ಮುಖ್ಯಕಾರ್ಯನಿರ್ವಹಣಾಧಿಕಾರಿ ಶ್ರೀ ಪಿ. ವಿಷ್ಣುಮೂರ್ತಿ ಆಚಾರ್ಯರವರಿಗೆ ನೀಡಿ ಗೌರವಿಸಲಾಯಿತು.

### ಶ್ರೀ ಕಾಳಿದಾಸ ಸಹಕಾರ ಬ್ಯಾಂಕ್



ಬೆಂಗಳೂರಿನ ಶ್ರೀ ಕಾಳಿದಾಸ ಸಹಕಾರ ಬ್ಯಾಂಕಿಗೆ "Best Urban Co-operative Bank" ರಾಷ್ಟ್ರೀಯ ಪ್ರಶಸ್ತಿಯನ್ನು ಬ್ಯಾಂಕಿನ ಮುಖ್ಯಕಾರ್ಯನಿರ್ವಹಣಾಧಿಕಾರಿಯಾದ ಶ್ರೀ ಮನುರವರಿಗೆ ನೀಡಿ ಗೌರವಿಸಲಾಯಿತು.

### ಉಡುಪಿ ಟೀಚರ್ಸ್ ಕೋ–ಆಪರೇಟಿವ್ ಬ್ಯಾಂಕ್




ಉಡುಪಿಯ ಟೀಚರ್ಸ್ ಕೋ–ಆಪರೇಟಿವ್ ಬ್ಯಾಂಕಿಗೆ ವ್ಯವಹಾರದಲ್ಲಿ ಸಾಧಿಸಿರುವ ಸರ್ವತೋಮುಖ ಪ್ರಗತಿಗೆ 2025ನೇ ಸಾಲಿನ Best Urban Co-operative Bank ಪ್ರಶಸ್ತಿಯನ್ನು ಬ್ಯಾಂಕಿನ ಅಧ್ಯಕ್ಷರಾದ ಶ್ರೀ ದಿನಕರ ಶೆಟ್ಟಿ ಕೆ. ಅವರಿಗೆ ನೀಡಿ ಗೌರವಿಸಲಾಯಿತು. ಈ ಸಂದರ್ಭದಲ್ಲಿ ಬ್ಯಾಂಕಿನ ನಿರ್ದೇಶಕರಾದ ಶ್ರೀ ಕಿಶನ್‌ರಾಜ್ ಶೆಟ್ಟಿ, ಶ್ರೀ ಸಂತೋಷ್‌ಕುಮಾರ್ ಶೆಟ್ಟಿ, ಶ್ರೀ ಆನಂದ ಪೂಜಾರಿ, ಶ್ರೀ ರಾಜೀವ ಶೆಟ್ಟಿ, ಶ್ರೀ ಮನೋಹರ, ಡಾ. ರಾಜೇಂದ್ರ ಕೆ., ಶ್ರೀ ನಿತ್ಯಾನಂದ ಶೆಟ್ಟಿ, ಮಹಾಪ್ರಬಂಧಕರಾದ ಶ್ರೀ ಮಂಜುನಾಥ ಶೆಟ್ಟಿ ಹಾಗೂ ಸಹಾಯಕ ಪ್ರಧಾನ ವ್ಯವಸ್ಥಾಪಕರಾದ ಶ್ರೀ ಪ್ರಮೋದ್ ಹೆಗ್ಡೆ ಜಿ. ರವರು ಉಪಸ್ಥಿತರಿದ್ದರು.

ಆರ್‌ಬಿಐನಿಂದ ನಾಣ್ಯಗಳ ಚಲಾವಣೆ ಬಗ್ಗೆ ಮಹತ್ವದ ಮಾಹಿತಿ 2
ಉಳಿತಾಯ ಬ್ಯಾಂಕ್ ಠೇವಣಿ ಖಾತೆ : ಜೀರೋ ಬ್ಯಾಲೆನ್ಸ್ ಅಕೌಂಟ್ ಹೊಂದಿರುವವರಿಗೆ ಡಿಜಿಟಲ್ ವಹಿವಾಟಿನ ಮಿತಿಯನ್ನು ರಿಸರ್ವ್ ಬ್ಯಾಂಕ್ ತೆಗೆದು ಹಾಕಿದೆ 4
ನಿಮ್ಮ ಪ್ರಶ್ನೆಗೆ ನಮ್ಮ ಉತ್ತರ 7

## ಸಂಪಾದಕೀಯ

### ಆತ್ಮೀಯ ಸಹಕಾರಿಗಳೇ...



# ರೂಪಾಯಿ ಮೌಲ್ಯ ಕುಸಿತ : ಪರಿಸ್ಥಿತಿಯನ್ನು ಮತ್ತಷ್ಟು ಹದಗೆಡಿಸುವ ಸಾಧ್ಯತೆ ಇದೆ

ಇತ್ತೀಚಿನ ದಿನಗಳಲ್ಲಿ ಅಮೇರಿಕಾದ ಡಾಲರ್‌ನೊಂದಿಗಿನ ವಿನಿಮಯ ದರದಲ್ಲಿ ನಮ್ಮ ರೂಪಾಯಿ ಮೌಲ್ಯ ದುರ್ಬಲಗೊಳ್ಳುತ್ತಲೇ ಸಾಗಿದೆ. ಪ್ರಸ್ತುತ ರೂಪಾಯಿ ಮೌಲ್ಯ ಪ್ರತಿ ಡಾಲರ್‌ಗೆ ರೂ. 90.14ರ ದಾಖಲೆಯ ಕನಿಷ್ಠ ಮಟ್ಟವನ್ನು ತಲುಪಿದೆ. ಹೀಗೆ ಪ್ರತಿ ಬಾರಿ ಡಾಲರ್ ವಿರುದ್ಧ ರೂಪಾಯಿ ಮೌಲ್ಯ ಕುಸಿಯುತ್ತಲೇ ಸಾಗಿದರೆ, ವಿದೇಶದಿಂದ ನಾವು ಖರೀದಿಸುವ ಸರಕುಗಳಿಗೆ ಹೆಚ್ಚಿನ ಮೊತ್ತ ತೆರಬೇಕಾಗುತ್ತದೆ. ಇದು ಹಣದುಬ್ಬರದ ಮೇಲೆ ನೇರವಾಗಿ ಪರಿಣಾಮ ಬೀರುವುದರಿಂದ ಇದನ್ನು ಸರಿದೂಗಿಸಲು ಆರ್‌ಬಿಐ ತನ್ನ ಮೀಸಲು ನಿಧಿಯನ್ನು ವೆಚ್ಚಮಾಡಬೇಕಾಗುತ್ತದೆ.

ಡಾಲರ್ ವಿರುದ್ಧ ರೂಪಾಯಿ ಹೀಗೆ ದುರ್ಬಲಗೊಳ್ಳುತ್ತ ಹೋದಲ್ಲಿ ಮುಂಬರುವ ದಿನಗಳಲ್ಲಿ ಅಗತ್ಯ ವಸ್ತುಗಳ ಬೆಲೆಗಳು ಏರಿಕೆಗೂ ಕಾರಣವಾಗಲಿದೆ. ಇದರಿಂದಾಗಿ, ಗ್ರಾಹಕರು ಗೃಹ, ವಾಹನ ಇನ್ನಿತರ ಸಾಲ ಮರುಪಾವತಿ ಮಾಡುವ ಹಾಗೂ ಮಕ್ಕಳ ಶಿಕ್ಷಣಕ್ಕಾಗಿ ಮಾಡುವ ಹೆಚ್ಚು ಹಣ ವೆಚ್ಚಮಾಡಬೇಕಾಗುತ್ತದೆ.  ಇದು ಸಾಮಾನ್ಯ ಜನರ ನಿತ್ಯ ಖರ್ಚು-ವೆಚ್ಚಗಳ ಮೇಲೆ ನೇರ ಪರಿಣಾಮ ಬೀರುತ್ತದೆ. ಅವರುಗಳು ತುರ್ತು ಸಮಯಕ್ಕೆಂದು ತೆಗೆದಿರಿಸಿದ್ದ 'ಮೀಸಲು ನಿಧಿ' ಕರಗುತ್ತದೆ. ತುರ್ತು ಸಮಯದಲ್ಲಿ ಹಣವಿಲ್ಲದೆ ಅವರುಗಳ ಕೈ ಕಟ್ಟಿ ಹಾಕಿದಂತಾಗಿ, ಕಂಗಾಲಾಗುವ ಪರಿಸ್ಥಿತಿ ಉಂಟಾಗುತ್ತದೆ.

ನಮ್ಮ ದೇಶ ಹೊರ ದೇಶಗಳಿಂದ ಪೆಟ್ರೋಲ್, ಡೀಸೆಲ್, ಅನಿಲ, ಅದುರು ಇತ್ಯಾದಿ ಸರಕುಗಳನ್ನು ಆಮದು ಮಾಡಿಕೊಳ್ಳುವುದು ಎಲ್ಲರಿಗೂ ಗೊತ್ತೇ ಇದೆ. ರೂಪಾಯಿ ದುರ್ಬಲಗೊಳ್ಳುತ್ತಾ ಡಾಲರ್ ಬಲಗೊಳ್ಳುತ್ತಾ ಹೋದಾಗ ಈ ಸರಕುಗಳಿಗಾಗಿ ನಮ್ಮ ದೇಶ ಹೆಚ್ಚಿನ ಬೆಲೆ ತೆರಬೇಕಾಗುತ್ತದೆ. ಇದು ಸಾಲದೆಂಬಂತೆ ಮಾರುಕಟ್ಟೆಯಲ್ಲಿ ಹಣದುಬ್ಬರ ಹೆಚ್ಚಾಗಿ, ಆರ್‌ಬಿಐ ವಿಧಿ ಇಲ್ಲದೆ ದರ ಕಡಿತಗೊಳಿಸುವುದರ ಬದಲು, ದರ ಏರಿಕೆ ಮಾಡುವ ಒತ್ತಡಕ್ಕೆ ಸಿಲುಕುತ್ತದೆ. ಇದು ಗೃಹ ಸಾಲಗಳನ್ನು ಒಳಗೊಂಡಂತೆ ಎಲ್ಲಾ ಬಗೆಯ ಸಾಲಗಳ ಮೇಲಿನ ಕಂತಿನ ಮೊತ್ತ ಹೆಚ್ಚಾಗುತ್ತದೆ. ಪರಿಸ್ಥಿತಿ ಸಧ್ಯ ಸುಧಾರಿಸುವ ಸಾಧ್ಯತೆಗಳು ಕಂಡು ಬರುತ್ತಿಲ್ಲ.

ಅಲ್ಲದೆ, ನಮ್ಮ ದೇಶದ ಉತ್ಪನ್ನಗಳ ಮೇಲೆ ಅಮೆರಿಕ ಶೇ.50ರಷ್ಟು ಸುಂಕ ವಿಧಿಸಿರುವುದು ನಮ್ಮ ರಫ್ತುದಾರರನ್ನು ಸಂಕಷ್ಟಕ್ಕೆ ಸಿಲುಕಿಸಿದೆ. ಅಲ್ಲದೆ, ವಿದೇಶೀ ಹೂಡಿಕೆದಾರರು ನಮ್ಮ ಮಾರುಕಟ್ಟೆಗಳಿಂದ ತಮ್ಮ ಹೂಡಿಕೆಗಳನ್ನು ಹಿಂತೆಗೆಯುತ್ತಿದ್ದಾರೆ. ಅಮೆರಿಕದೊಂದಿಗೆ ನಡೆಯಬೇಕಿದ್ದ ವ್ಯಾಪಾರ ಒಪ್ಪಂದ ಇನ್ನೂ ವಿಳಂಬಗೊಂಡಿರುವುದು, ಪರಿಸ್ಥಿತಿಯನ್ನು ಮತ್ತಷ್ಟು ಹದಗೆಡಿಸುವ ಸಾಧ್ಯತೆ ಇದೆ.

ಎಚ್.ಕೆ. ಪಾಟೀಲ

## ಆರ್‌ಬಿಐನಿಂದ ನಾಣ್ಯಗಳ ಚಲಾವಣೆ ಬಗ್ಗೆ ಮಹತ್ವದ ಮಾಹಿತಿ




**ನವದೆಹಲಿ :** ಮಾರುಕಟ್ಟೆಗಳಲ್ಲಿ 10 ರೂ. 20 ರೂ. ಮೌಲ್ಯದ ನಾಣ್ಯಗಳನ್ನು ನೀಡಿದರೆ ಹಲವರು ಇಂದಿಗೂ ತೆಗೆದುಕೊಳ್ಳುವುದಿಲ್ಲ. ಅದರಲ್ಲೂ 50 ಪೈಸೆಯ ನಾಣ್ಯ ಸಂಪೂರ್ಣವಾಗಿ ನಿಷೇಧವಾಗಿದೆ ಎಂದೇ ಎಲ್ಲರೂ ನಂಬಿದ್ದಾರೆ. ಈ ಗೊಂದಲಗಳ ಹಿನ್ನೆಲೆಯಲ್ಲಿ ಆರ್‌ಬಿಐ ಸ್ಪಷ್ಟನೆಯೊಂದನ್ನು ನೀಡಿದೆ.

50 ಪೈಸೆಯಿಂದ ಹಿಡಿದು 20 ರೂ.ವರೆಗಿನ ನಾಣ್ಯಗಳು ಕಾನೂನು ಬದ್ಧವಾಗಿ ಚಲಾವಣೆಯಲ್ಲಿವೆ ಎಂದು ಭಾರತೀಯ ರಿಸರ್ವ್ ಬ್ಯಾಂಕ್ ಹೇಳಿದೆ.

ಹೀಗಾಗಿ ನಾಣ್ಯಗಳ ವಿಷಯದಲ್ಲಿ ಜಾಗೃತಿ ಮೂಡಿಸಲು ಮುಂದಾಗಿದೆ. ಜಾಗೃತಿ ಅಭಿಯಾನ ನಡೆಸುತ್ತಿದೆ. ಅಲ್ಲದೇ, ಜನರಿಗೆ ಸಂದೇಶಗಳನ್ನು ಕಳುಹಿಸುವುದರ ಮೂಲಕವು ಜಾಗೃತಿ ಮೂಡಿಸುತ್ತಿದೆ. ಈಗಾಗಲೇ ನಾಣ್ಯಗಳ ಚಲಾವಣೆಯ ವಿಷಯದ ಕುರಿತು ಎರಡು ವಿಡಿಯೋಗಳನ್ನು ಆರ್‌ಬಿಐ ಬಿಡುಗಡೆ ಮಾಡಿದೆ.

ಬಿಡುಗಡೆ ಮಾಡಿರುವ ವಿಡಿಯೋಗಳಲ್ಲಿ ಅಂಗಡಿ ಮಾಲೀಕರು ನಾಣ್ಯ ಸ್ವೀಕರಿಸದೇ ಇರುವುದನ್ನು ತೋರಿಸಲಾಗಿದೆ. ಅದೇ ರೀತಿ ವಿಡಿಯೋ ಕೊನೆಯಲ್ಲಿ ಓರ್ವ ಅಂಗಡಿ ಮಾಲೀಕ ನಾಣ್ಯ ಸ್ವೀಕರಿಸುವುದನ್ನು ತೋರಿಸುವ ಮೂಲಕ ನಾಣ್ಯಗಳು ಇನ್ನೂ ಮಾನ್ಯವಾಗಿವೆ ಮತ್ತು ಚಾಲ್ತಿಯಲ್ಲಿವೆ. ನಾಣ್ಯಗಳ ಬಗೆಗಿನ ವದಂತಿ ನಂಬಬೇಡಿ. ಒಂದೇ ಮೌಲ್ಯದ ವಿಭಿನ್ನ ನಾಣ್ಯ ವಿನ್ಯಾಸಗಳು ದೀರ್ಘಕಾಲದವರೆಗೆ ಚಲಾವಣೆಯಲ್ಲಿರುತ್ತವೆ. ಅವೆಲ್ಲವೂ ಸ್ವೀಕಾರಾರ್ಹ ಎಂದು ಆರ್‌ಬಿಐ ವಿಡಿಯೋದಲ್ಲಿ ಹೇಳಿದೆ.

ನಾಣ್ಯಗಳನ್ನು ಸ್ವೀಕರಿಸಲು ಹಿಂದೇಟು ಹಾಕುತ್ತಿದ್ದಾರೆ. ನಾಣ್ಯಗಳ ಬದಲಿಗೆ ನೋಟನ್ನು ಕೇಳುತ್ತಿದ್ದಾರೆ ಎಂಬ ಸಾಕಷ್ಟು ವರದಿಗಳು ಬಂದಿರುವ ಹಿನ್ನೆಲೆಯಲ್ಲಿ ಇವುಗಳನ್ನು ರದ್ದುಪಡಿಸಿಲ್ಲ ಮತ್ತು ನಾಗರಿಕರು ಅದನ್ನು ಮುಕ್ತವಾಗಿ ಬಳಸುವುದನ್ನು ಮುಂದುವರಿಸಬಹುದು ಎಂದು ತಿಳಿಸಿದೆ.

# ಶ್ರೀ ಲಕ್ಷ್ಮೀ ಮಹಿಳಾ ಸಹಕಾರ ಬ್ಯಾಂಕಿನಲ್ಲಿ ಕಾರ್ಯಾಗಾರ





**ಬೆಂಗಳೂರು :** ದಿ. 25-11-2025 ರಂದು ಶ್ರೀ ಲಕ್ಷ್ಮೀ ಮಹಿಳಾ ಸಹಕಾರ ಬ್ಯಾಂಕಿಗೆ ಸಿಕೋಪಾ ಮತ್ತು ರಾಷ್ಟ್ರೀಯ ಗ್ರಾಮೀಣ ಬ್ಯಾಂಕಿಂಗ್ ಸಂಸ್ಥೆಗಳ ಸಂಯುಕ್ತ ಆಶ್ರಯದಲ್ಲಿ ಕರ್ನಾಟಕದ ಸಹಕಾರಿ ಸಂಸ್ಥೆಗಳ ಅಧ್ಯಕ್ಷರು / ನಿರ್ದೇಶಕರಿಗೆ, "ನಾಯಕತ್ವ ಅಭಿವೃದ್ಧಿ ಕಾರ್ಯಾಗಾರ"ವನ್ನು ಏರ್ಪಡಿಸಲಾಗಿತ್ತು.

ಮಾಜಿ ಸಚಿವರು ಹಾಗೂ ಸಿಕೋಪಾ ಅಧ್ಯಕ್ಷರಾದ ಡಾ. ಲೀಲಾದೇವಿ ಆರ್ ಪ್ರಸಾದ್, ಸಿಕೋಪಾದ ಪ್ರಧಾನ ಕಾರ್ಯದರ್ಶಿಗಳಾದ ಶ್ರೀಮತಿ ನಾಗರತ್ನ ರಾವ್, ಶ್ರೀ ಲಕ್ಷ್ಮೀ ಮಹಿಳಾ ಸಹಕಾರ ಬ್ಯಾಂಕಿನ ಅಧ್ಯಕ್ಷರಾದ ಡಾ. ವಾಸವಿ ರಂಗಧಾಮ್ ಹಾಗೂ ನಿರ್ದೇಶಕರುಗಳು, ಮುಖ್ಯಕಾರ್ಯನಿರ್ವಹಾಧಿಕಾರಿ ಶ್ರೀ ಗೋವಿಂದಯ್ಯ ಟಿ. ರವರು ಕಾರ್ಯಾಗಾರವನ್ನು ಉದ್ಘಾಟಿಸಿ, ಮಹಿಳಾ ಮತ್ತು ಪುರುಷ ಸದಸ್ಯರು ಹೇಗೆ ಜವಾಬ್ದಾರಿಯಿಂದ ಜಾಗರೂಕತೆಯಿಂದ ತಮ್ಮ ಸಂಸ್ಥೆಗಳನ್ನು ನಡೆಸಿಕೊಂಡು ಹೋಗಬೇಕು ಮತ್ತು ಅವುಗಳನ್ನು ಯಾವ ರೀತಿ ಸದುಪಯೋಗಪಡಿಸಿಕೊಳ್ಳಬೇಕು ಮತ್ತು ಸಂಸ್ಥೆಗಳನ್ನು ನಡೆಸುವ ನಿರ್ದೇಶಕರು ನಿರ್ವಾಹಣಾಧಿಕಾರಿಗಳು ಹೇಗೆ ತಮ್ಮ ಸೇವೆಯನ್ನು ಜವಾಬ್ದಾರಿಯಿಂದ ನಿಷ್ಠೆಯಿಂದ ಪ್ರಾಮಾಣಿಕತೆಯಿಂದ ಸದುಪಯೋಗ ಪಡಿಸಿಕೊಳ್ಳುವ ಬಗ್ಗೆ ಸವಿರವಾಗಿ ಕಾರ್ಯಾಗಾರವನ್ನು ನೀಡಲಾಗಿರುತ್ತದೆ.

# ಎಂ.ಸಿ.ಸಿ. ಬ್ಯಾಂಕಿನ 15ನೇ ಎಟಿಎಂ ಉಡುಪಿ ಶಾಖೆಯಲ್ಲಿ ಉದ್ಘಾಟನೆ






**ಮಂಗಳೂರು :** ಎಂಸಿಸಿ ಬ್ಯಾಂಕ್, ಮಂಗಳೂರು ತನ್ನ 15ನೇ ಎಟಿಎಂಅನ್ನು ನವಂಬರ್ 23, 2025ರ ರವಿವಾರ ಉಡುಪಿ ಶಾಖೆಯಲ್ಲಿ ಉದ್ಘಾಟಿಸಲಾಯಿತು. ಈ ಎಟಿಎಂ ಅನ್ನು ಉದ್ಯಾವರದ ಸೇಂಟ್ ಕ್ಸೇವಿಯರ್ ಚರ್ಚ್‌ನ ಧರ್ಮ ಗುರು ವಂದನೀಯ ಫಾ। ಅನಿಲ್ ಡಿಸೋಜಾ ಉದ್ಘಾಟಿಸಿದರು.

ಉಡುಪಿಯ ಶೋಕ ಮಾತೆ ಚರ್ಚ್‌ನ ಧರ್ಮ ಗುರು ವಂದನೀಯ ಫಾ। ಚಾರ್ಲ್ಸ್‌ಮಿನೇಜಸ್ ಅವರು ಎಟಿಎಂಅನ್ನು ಆಶೀರ್ವದಿಸಿದರು. ಹೊಸದಾಗಿ ಉದ್ಘಾಟನೆಗೊಂಡ ಎಟಿಎಂನಿಂದ ಮೊದಲ ನಗದು ಹಿಂಪಡೆಯುವಿಕೆಯನ್ನು ತಳ್ಳೂರಿನ ಶ್ರೀ ಶಿವಪ್ರಸಾದ್ ಶಿವರಾಮ ಶೆಟ್ಟಿ ನೆರವೇರಿಸಿದರು.

ಸಮಾರಂಭದ ಅಧ್ಯಕ್ಷತೆಯನ್ನು ಎಂಸಿಸಿ ಬ್ಯಾಂಕಿನ ಅಧ್ಯಕ್ಷ ಶ್ರೀ ಅನಿಲ್ ಲೋಬೊ ವಹಿಸಿದ್ದರು.

ಲೊಜಿಸ್ಟಿಕ್ಸ್ ಅಧಿಕಾರಿ ಶ್ರೀ ಜಾನ್‌ಕಾರ್ಲೊ ಮುಖ್ಯ ಅತಿಥಿಯಾಗಿದ್ದರು. ನಿರ್ದೇಶಕ ಶ್ರೀ ಎಲ್ರಾಯ್ ಕ್ರಾಸ್ಟೊಗಣ್ಯರನ್ನು ಸ್ವಾಗತಿಸಿದರು. ಸಿಬ್ಬಂದಿ ಸದಸ್ಯರ ನೇತೃತ್ವದಲ್ಲಿ ಪ್ರಾರ್ಥನೆಯೊಂದಿಗೆ ಕಾರ್ಯಕ್ರಮ ಆರಂಭಗೊಂಡಿತು. ಶ್ರೀ ಆಲ್ವಿನ್‌ದಾಂತಿ ನಿರೂಪಿಸಿ ವಂದಿಸಿದರು.

ಬ್ಯಾಂಕಿನ ನಿರ್ದೇಶಕರಾದ ಶ್ರೀ ಫೆಲಿಕ್ಸ್ ಡಿಕ್ರುಜ್, ಮಹಾ ಪ್ರಬಂಧಕ ಶ್ರೀ ಸುನಿಲ್ ಮಿನೇಜಸ್, ಉಪ ಪ್ರಧಾನ ವ್ಯವಸ್ಥಾಪಕ ಶ್ರೀ ರಾಜ್ ಮೆನೆಜಸ್, ಶಾಖಾ ವ್ಯವಸ್ಥಾಪಕ ಶ್ರೀ ಪ್ರದೀಪ್ ಡಿಸೋಜ, ಶಾಖಾ ವ್ಯವಸ್ಥಾಪಕರು, ಸಿಬ್ಬಂದಿ ಸದಸ್ಯರು ಮತ್ತು ಹೆಚ್ಚಿನ ಸಂಖ್ಯೆಯಲ್ಲಿ ಗ್ರಾಹಕರು ಭಾಗವಹಿಸಿದ್ದರು.

# ಉಳಿತಾಯ ಬ್ಯಾಂಕ್ ಠೇವಣಿ ಖಾತೆ : ಜೀರೋ ಬ್ಯಾಲೆನ್ಸ್ ಅಕೌಂಟ್ ಹೊಂದಿರುವವರಿಗೆ ಡಿಜಿಟಲ್ ವಹಿವಾಟಿನ ಮಿತಿಯನ್ನು ರಿಸರ್ವ್ ಬ್ಯಾಂಕ್ ತೆಗೆದು ಹಾಕಿದೆ

**ಮುಂಬೈ :** ರಿಸರ್ವ್ ಬ್ಯಾಂಕ್ ಪ್ರಮುಖ ನಿರ್ಧಾರವನ್ನು ತೆಗೆದುಕೊಂಡಿದೆ. ಮೂಲ ಉಳಿತಾಯ ಬ್ಯಾಂಕ್ ಠೇವಣಿ ಖಾತೆ ಹೊಂದಿರುವವರಿಗೆ ಖಾತೆಗಳಿಂದ ಮಾಡುವ ಡಿಜಿಟಲ್ ವಹಿವಾಟಿನ ಮಿತಿಯನ್ನು ರಿಸರ್ವ್ ಬ್ಯಾಂಕ್ ತೆಗೆದುಹಾಕಿದೆ. ಇದು ಈಗ ಮಾಸಿಕ ಆಧಾರದ ಮೇಲೆ ಯಾವುದೇ ಪ್ರಮಾಣದ ಹಣವನ್ನು ಠೇವಣಿ ಮಾಡುವ ಸೌಲಭ್ಯವನ್ನು ಒದಗಿಸಿದೆ. ಇದರರ್ಥ ಠೇವಣಿಗಳ ಮೇಲೆ ಇನ್ನು ಮುಂದೆ ಯಾವುದೇ ನಿರ್ಬಂಧಗಳಿಲ್ಲ.

ಇದರೊಂದಿಗೆ, ಠೇವಣಿ ಶುಲ್ಕವನ್ನು ತೆಗೆದು ಹಾಕಲು ರಿಸರ್ವ್ ಬ್ಯಾಂಕ್ ನಿರ್ಧಾರ ತೆಗೆದುಕೊಂಡಿದೆ. ಈ ಖಾತೆಯನ್ನು ಹೊಂದಿರುವವರಿಗೆ ತಿಂಗಳಿಗೆ ನಾಲ್ಕು ಬಾರಿ ಎಟಿಎಂ ಹಿಂಪಡೆಯುವಿಕೆ ಸೇವೆಗಳನ್ನು ಉಚಿತವಾಗಿ ಬಳಸಲು ಅವಕಾಶ ನೀಡಬೇಕು ಮತ್ತು ವಾರ್ಷಿಕ ಶುಲ್ಕವಿಲ್ಲದೆ ಡೆಬಿಟ್ ಕಾರ್ಡ್ ಒದಗಿಸಬೇಕು ಎಂದು ಅದು ಸೂಚಿಸಿದೆ.

ಉಚಿತ ಸೇವೆಗಳು ವರ್ಷಕ್ಕೆ 25 ಚೆಕ್ ಹಾಳೆಗಳ ಉಚಿತ ಪಾಸ್ ಬುಕ್ ಮತ್ತು ಸ್ಟೇಟೆಂಮೆಟ್‌ಗಳನ್ನು ಪಡೆಯುವ ಅವಕಾಶವನ್ನು ಆರ್.ಬಿ.ಐ. ಒದಗಿಸಿದೆ. ಇಂಟರ್ನೆಟ್ ಮತ್ತು ಮೊಬೈಲ್ ಬ್ಯಾಂಕಿಂಗ್‌ನಂತಹ ಸೌಲಭ್ಯಗಳನ್ನು ಒದಗಿಸಲು ಸಹ ಸೂಚಿಸಿದೆ. ಡಿಜಿಟಲ್ ಪಾವತಿಗಳಿಗೆ ಯಾವುದೇ ದಂಡ ವಿಧಿಸದಿರುವ ನಿಯಮಗಳನ್ನು ತಂದಿದೆ.

ಮುಂದಿನ ವರ್ಷ ಏಪ್ರಿಲ್ 1 ರಿಂದ ಈ ಹೊಸ ನಿಯಮಗಳು ಜಾರಿಗೆ ಬರಲಿವೆ ಎಂದು ಆರ್.ಬಿ.ಐ. ಸ್ಪಷ್ಟಪಡಿಸಿದೆ. ಈ ನಿಯಮಗಳು ಅಸ್ತಿತ್ವದಲ್ಲಿರುವ BSBD (ಮೂಲ ಉಳಿತಾಯ ಬ್ಯಾಂಕ್ ಠೇವಣಿ ಖಾತೆ) ಗ್ರಾಹಕರಿಗೆ ಹಾಗೂ ಹೊಸ ಖಾತೆದಾರರಿಗೆ ಅನ್ವಯವಾಗುತ್ತವೆ ಎಂದು ಸ್ಪಷ್ಟಪಡಿಸಿದೆ. ನಿಯಮಿತ ಉಳಿತಾಯ ಖಾತೆಗಳನ್ನು ಹೊಂದಿರುವವರು ಅವುಗಳನ್ನು BSBD (ಮೂಲ ಉಳಿತಾಯ ಬ್ಯಾಂಕ್ ಠೇವಣಿ ಖಾತೆ) ಖಾತೆಗಳಾಗಿ ಪರಿವರ್ತಿಸಬಹುದು ಎಂದು ಹೇಳಿದೆ.

ಅಕ್ಟೋಬರ್ 1, 2025ರಂದು ತರಲಾದ ನಿಯಮಗಳು, ಸಾರ್ವಜನಿಕರಿಂದ ಪಡೆದ ಪ್ರತಿಕ್ರಿಯೆಯ ಆಧಾರದ ಮೇಲೆ ನಿಯಮಗಳನ್ನು ಬದಲಾಯಿಸಲಾಗಿದೆ ಎಂದು ಹೇಳಿವೆ. ಜನರು ಡಿಜಿಟಲ್ ವಹಿವಾಟಿನತ್ತ ಸಾಗುತ್ತಿರುವುದರಿಂದ ಶೂನ್ಯ ಖಾತೆಗಳನ್ನು ಹೊಂದಿರುವವರಿಗೆ ಉಚಿತ ಮೂಲಭೂತ ಸೇವೆಗಳನ್ನು ಒದಗಿಸುವ ಉದ್ದೇಶದಿಂದ ಈ ನಿರ್ಧಾರಗಳನ್ನು ತೆಗೆದುಕೊಳ್ಳಲಾಗಿದೆ ಎಂದು ಅದು ಸ್ಪಷ್ಟಪಡಿಸಿದೆ.




**ಯಾವುದೇ ಬಲವಂತವಿಲ್ಲ :** ಬ್ಯಾಂಕುಗಳು ಗ್ರಾಹಕರನ್ನು ಎಟಿಎಂ ಕಾರ್ಡ್‌ಗಳು, ಚೆಕ್ ಪುಸ್ತಕಗಳು, ಡಿಜಿಟಲ್ ಬ್ಯಾಂಕಿಂಗ್ ಮತ್ತು ಇಂಟರ್ನೆಟ್ ಸೇವೆಗಳನ್ನು ಬಳಸಲು ಒತ್ತಾಯಿಸಬಾರದು ಎಂದು ಆರ್‌ಬಿಐ ಹೇಳಿದೆ. ವಿನಂತಿಯ ಮೇರೆಗೆ ಮಾತ್ರ ಅವುಗಳನ್ನು ಒದಗಿಸಬೇಕು. ಯಾವುದೇ ತಾರತಮ್ಯವಿಲ್ಲದೆ ಮತ್ತು ಕನಿಷ್ಠ ಬ್ಯಾಲೆನ್ಸ್ ಷರತ್ತು ವಿಧಿಸದೆ ಖಾತೆಗಳನ್ನು ಪಾರದರ್ಶಕವಾಗಿ ನಿರ್ವಹಿಸಬೇಕು ಎಂದು ಅದು ಸೂಚಿಸಿದೆ. ನಿಯಮಿತ ಉಳಿತಾಯ ಖಾತೆಯನ್ನು ಶೂನ್ಯ ಖಾತೆಯಾಗಿ ಪರಿವರ್ತಿಸಲು ಅವಕಾಶ ನೀಡಬೇಕು ಮತ್ತು ಈ ಪ್ರಕ್ರಿಯೆಯನ್ನು ಏಳು ದಿನಗಳಲ್ಲಿ ಪೂರ್ಣಗೊಳಿಸಬೇಕು ಎಂದು ಹೇಳಲಾಗಿದೆ. ಅನೇಕ ಬ್ಯಾಂಕುಗಳು ಶೂನ್ಯ ಬ್ಯಾಲೆನ್ಸ್ ಉಳಿತಾಯ ಖಾತೆಗಳನ್ನು ಈಗಾಗಲೆ ನೀಡುತ್ತಿವೆ.

**ದೇಶದ 3 ಸುರಕ್ಷಿತ ಬ್ಯಾಂಕುಗಳ ಪಟ್ಟಿ :** ದೇಶದಲ್ಲಿ ಹಣ ಉಳಿತಾಯ ಮಾಡಲು, ಹೂಡಿಕೆ ಮಾಡಲು ಯಾವ ಬ್ಯಾಂಕುಗಳು ಸುರಕ್ಷಿತ ಅನ್ನೋ ಪಟ್ಟಿಯನ್ನು ಆರ್‌ಬಿಐ ಬಿಡುಗಡೆ ಮಾಡಿದೆ. ರಿಸರ್ವ್ ಬ್ಯಾಂಕ್ ಆಫ್ ಇಂಡಿಯಾ ಪ್ರಕಾರ ಮೂರು ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ, ಹೆಚ್‌ಡಿಎಫ್‌ಸಿ ಹಾಗೂ ಐಸಿಐಸಿಐ ಈ ಮೂರು ಬ್ಯಾಂಕುಗಳು ಅತ್ಯಂತ ಸುರಕ್ಷಿತ. ಈ ಬ್ಯಾಂಕುಗಳು ಅತ್ಯಂತ ವ್ಯವಸ್ಥಿತವಾಗಿ ಹಣಕಾಸು ವ್ಯವಹಾರವನ್ನು ನಿರ್ವಹಿಸುತ್ತವೆ. ಈ ಮೂರು ಬ್ಯಾಂಕುಗಳು ಪಾರದರ್ಶಕತೆ, ಲೆಕ್ಕ, ಆಡಿಟ್ ಎಲ್ಲವೂ ಉತ್ತಮವಾಗಿದೆ ಎಂದು ಆರ್‌ಬಿಐ ಹೇಳಿದೆ.

## ಬಿ.ಡಿ.ಸಿ.ಸಿ. ಬ್ಯಾಂಕಿನ ನಿರ್ದೇಶಕರಾಗಿ ಶ್ರೀ ಕೆ.ಸಿ. ಕೃಷ್ಣಪ್ಪರವರ ಆಯ್ಕೆ

**ಬೆಂಗಳೂರು :** ಶ್ರೀ ಕಾಳಿದಾಸ ಸಹಕಾರ ಬ್ಯಾಂಕಿನ ಅಧ್ಯಕ್ಷರಾದ ಸಹಕಾರರತ್ನ ಶ್ರೀ ಕೆ.ಸಿ. ಕೃಷ್ಣಪ್ಪರವರು ಬಿ.ಡಿ.ಸಿ.ಸಿ ಬ್ಯಾಂಕಿನ ನಿರ್ದೇಶಕರಾಗಿ ಆಯ್ಕೆಯಾಗಿರುತ್ತಾರೆ. ಇವರನ್ನು ಬ್ಯಾಂಕಿನ ಎಲ್ಲಾ ಆಡಳಿತ ಮಂಡಳಿ ಸದಸ್ಯರು ಹೃತ್ಪೂರ್ವಕವಾಗಿ ಅಭಿನಂದಿಸಿದರು.



# ಪುತ್ತೂರು ಕೋ-ಆಪರೇಟಿವ್ ಟೌನ್ ಬ್ಯಾಂಕ್ ವತಿಯಿಂದ ಕ್ಯಾಂಪ್ಕೊ ಅಧ್ಯಕ್ಷ ಎಸ್.ಆರ್. ಸತೀಶ್‌ಚಂದ್ರರಿಗೆ ಭಾವಪೂರ್ಣ ಅಭಿನಂದನೆ



**ಪುತ್ತೂರು** : ಕ್ಯಾಂಪ್ಕೊ ಅಧ್ಯಕ್ಷರಾಗಿ ಅವಿರೋಧವಾಗಿ ಆಯ್ಕೆಯಾಗಿರುವ ಎಸ್.ಆರ್. ಸತೀಶ್ಚಂದ್ರರವರಿಗೆ ಪುತ್ತೂರು ಕೋ-ಆಪರೇಟಿವ್ ಟೌನ್ ಬ್ಯಾಂಕ್ ವತಿಯಿಂದ ಭಾವಪೂರ್ಣ ಅಭಿನಂದನಾ ಸಮಾರಂಭವನ್ನು ಬ್ಯಾಂಕಿನ ಸಭಾಂಗಣದಲ್ಲಿ ಗೌರವಪೂರ್ವಕವಾಗಿ ನಡೆಸಲಾಯಿತು.

ಕಾರ್ಯಕ್ರಮದಲ್ಲಿ ಬ್ಯಾಂಕಿನ ಅಧ್ಯಕ್ಷರಾದ ಶ್ರೀ ಎನ್.ಕಿಶೋರ್ ಕೊಳತ್ತಾಯ ಅವರು ಅಧ್ಯಕ್ಷತೆ ವಹಿಸಿ, ವಿಶೇಷ ಅಭಿನಂದನಾ ಭಾಷಣದ ಮೂಲಕ ಪುತ್ತೂರು ಟೌನ್ ಬ್ಯಾಂಕ್ ಮತ್ತು ಸತೀಶ್ಚಂದ್ರರವರ ನಡುವಿನ ಅವಿನಾಭಾವ ಬಾಂಧವ್ಯವನ್ನು ಸ್ಮರಿಸಿದರು. ಬ್ಯಾಂಕಿನ ಅಭಿವೃದ್ಧಿ ಹಾಗೂ ಪ್ರಗತಿಪರ ಚಟುವಟಿಕೆಗಳಲ್ಲಿ ಅವರು ನೀಡಿರುವ ಮಾರ್ಗದರ್ಶನವನ್ನು ವಿಶೇಷವಾಗಿ ಉಲ್ಲೇಖಿಸಿ, ಬ್ಯಾಂಕಿನ ಪರವಾಗಿ ಹೃತ್ಪೂರ್ವಕ ಅಭಿನಂದನೆಗಳನ್ನು ಅರ್ಪಿಸಿದರು.

ಮುಂದುವರೆದು ಮಾತನಾಡಿದ ಅವರು, ನೂತನ ಕ್ಯಾಲೆಂಡರ್ ವರ್ಷದಲ್ಲಿ ಬ್ಯಾಂಕ್ ಹಲವು ವಿನೂತನ ಕಾರ್ಯಕ್ರಮಗಳನ್ನು ಜಾರಿಗೆ ತರುವ ಉದ್ದೇಶವಿದ್ದು, ಬ್ಯಾಂಕಿನ ಡಿಜಿಟಲೀಕರಣಕ್ಕೆ ವಿಶೇಷ ಪ್ರಾಧಾನ್ಯತೆ ನೀಡಲಾಗುತ್ತಿದೆ ಎಂದರು. ಈ ವರ್ಷಾಂತ್ಯದೊಳಗೆ ಬ್ಯಾಂಕಿನ ಸಂಪೂರ್ಣ ಡಿಜಿಟಲೀಕರಣ ಕಾರ್ಯ ಪೂರ್ಣಗೊಳ್ಳುವ ವಿಶ್ವಾಸವನ್ನೂ ವ್ಯಕ್ತಪಡಿಸಿದರು.

ಅಭಿನಂದನೆ ಸ್ವೀಕರಿಸಿದ ಎಸ್.ಆರ್.ಸತೀಶ್ಚಂದ್ರರು, ತಮ್ಮ ಬಾಲ್ಯದಿಂದಲೂ ಪುತ್ತೂರು ಟೌನ್ ಬ್ಯಾಂಕಿನೊಂದಿಗೆ ಹೊಂದಿರುವ ಭಾವನಾತ್ಮಕ ಹಾಗೂ ನಿಕಟವಾದ ಸಂಬಂಧವನ್ನು ನೆನೆದು ಸಂತಸ ವ್ಯಕ್ತಪಡಿಸಿದರು. ಸಹಕಾರಿ ಕ್ಷೇತ್ರದಲ್ಲಿ ಸತ್ಯ, ಧರ್ಮ ಮತ್ತು ಪರಿಶ್ರಮವೇ ಯಶಸ್ಸಿನ ಮೂಲವೆಂದು ತಮ್ಮ ಅನುಭವ ಹಂಚಿಕೊಂಡ ಅವರು, ಸಹಕಾರ ಸಂಸ್ಥೆಗಳ ಪ್ರತಿಯೊಬ್ಬ ಸಿಬ್ಬಂದಿಗಳು ನಿಷ್ಠೆಯಿಂದ ಕಾರ್ಯನಿರ್ವಹಿಸಿದರೆ ಅದ್ಭುತ ಸಾಧನೆ ಸಾಧ್ಯವೆಂದು ಸಲಹೆ ನೀಡಿದರು. ಪುತ್ತೂರು ನಗರದ ಅತಿ ಹಿರಿಯ ಹಾಗೂ ವಿಶ್ವಾಸಾರ್ಹ ಸಹಕಾರಿ ಬ್ಯಾಂಕ್ ಆಗಿ ಗುರುತಿಸಿಕೊಂಡಿರುವ ಟೌನ್ ಬ್ಯಾಂಕ್ ತಮ್ಮನ್ನು ಸತ್ಕರಿಸಿದ ಬಗ್ಗೆ ಹೃತ್ಪೂರ್ವಕ ಕೃತಜ್ಞತೆ ಸಲ್ಲಿಸಿದರು.

ಬ್ಯಾಂಕಿನ ಮುಖ್ಯಕಾರ್ಯನಿರ್ವಹಣಾಧಿಕಾರಿ ಬಿ.ಶೇಖರ ಶೆಟ್ಟಿ ಸ್ವಾಗತಿಸಿ ಕಾರ್ಯಕ್ರಮ ನಿರ್ವಹಿಸಿದರು. ಹಿರಿಯ ನಿರ್ದೇಶಕ ಚಂದ್ರಶೇಖರ ರಾವ್ ಬಪ್ಪಳಿಗೆ ಅವರು ಸನ್ಮಾನಿತರನ್ನು ಪರಿಚಯಿಸಿ ಪ್ರಾಸ್ತಾವಿಕ ಮಾತುಗಳನ್ನಾಡಿದರು.

ಬ್ಯಾಂಕಿನ ಉಪಾಧ್ಯಕ್ಷ ಶ್ರೀಧರಗೌಡ ಧನ್ಯವಾದಗಳನ್ನು ಸಲ್ಲಿಸಿದರು. ಸಮಾರಂಭದಲ್ಲಿ ಕ್ಯಾಂಪ್ಕೊ ನಿರ್ದೇಶಕರಾದ ಮುರಳಿಕೃಷ್ಣ ಕೆ.ಎನ್., ಸರಸ್ವತಿ ಸೌಹಾರ್ದ ಸಹಕಾರಿ ಸಂಘದ ಮುಖ್ಯಕಾರ್ಯನಿರ್ವಹಣಾಧಿಕಾರಿ ವಸಂತಕುಮಾರ್, ಶಿವರಂಜನ್, ಬ್ಯಾಂಕಿನ ನಿರ್ದೇಶಕರಾದ ಚಂದ್ರಶೇಖರ ರಾವ್ ಬಪ್ಪಳಿಗೆ, ಕಿರಣ್‌ಕುಮಾರ್ ರೈ, ರಾಜು ಶೆಟ್ಟಿ, ರಾಮಚಂದ್ರ ಕಾಮತ್, ಮಲ್ಲೇಶ್ ಕುಮಾರ್, ಶ್ರೀಧರ ಪಟ್ಲ, ಶ್ರೀಮತಿ ಸೀಮಾ ಎ.ಎ., ಟೌನ್ ಬ್ಯಾಂಕಿನ ಪುತ್ತೂರು ಶಾಖಾಧಿಕಾರಿ ಚಿದಂಬರ, ಸಿಬ್ಬಂದಿ ವರ್ಗ ಸೇರಿದಂತೆ ಅನೇಕ ಗಣ್ಯರು ಹಾಜರಿದ್ದರು.



## ಸಹಕಾರ ಶಿಕ್ಷಣ ನಿಧಿ ಸಲ್ಲಿಕೆ

**ಬೆಂಗಳೂರು** : ಶ್ರೀ ಕಾಳಿದಾಸ ಸಹಕಾರ ಬ್ಯಾಂಕ್ ಲಿ., ಬೆಂಗಳೂರು ಇದರ ಸಹಕಾರ ಶಿಕ್ಷಣ ನಿಧಿ ಚೆಕ್‌ನ್ನು ಬ್ಯಾಂಕಿನ ಅಧ್ಯಕ್ಷರಾದ ಶ್ರೀ ಕೆ.ಸಿ. ಕೃಷ್ಣಪ್ಪರವರು ಮಹಾಮಂಡಳದ ಉಪಮುಖ್ಯಕಾರ್ಯನಿರ್ವಹಣಾಧಿಕಾರಿ ಶ್ರೀ ಅನಿಲ ಎಚ್. ಕಿರೇಸೂರರವರಿಗೆ ಸಲ್ಲಿಸಿದರು. ಈ ಸಂದರ್ಭದಲ್ಲಿ ಬ್ಯಾಂಕಿನ ಮುಖ್ಯಕಾರ್ಯನಿರ್ವಹಣಾಧಿಕಾರಿ ಶ್ರೀ ಮನು, ಸಲಹೆಗಾರ ಶ್ರೀ ಹೆಚ್. ಎಂ.ಇಂದ್ರಕುಮಾರ್ ರವರು ಉಪಸ್ಥಿತರಿದ್ದರು.

## ಕರ್ನಾಟಕ ಸರ್ಕಾರ

ಸಂಖ್ಯೆ: ಸಿಆಸುಇ 16 ಹೆಚ್ ಹೆಚ್ಎಲ್ 2025

ಕರ್ನಾಟಕ ಸರ್ಕಾರದ ಸಚಿವಾಲಯ,
ವಿಧಾನ ಸೌಧ,
ಡಾ. ಬಿ.ಆರ್. ಅಂಬೇಡ್ಕರ್ ವೀದಿ,
ಬೆಂಗಳೂರು, ದಿನಾಂಕ : 17.11.2025

### ಅಧಿಸೂಚನೆ-II

ಭಾರತ ಸರ್ಕಾರದ ಒಳಾಡಳಿತ ವ್ಯವಹಾರಗಳ ಇಲಾಖೆಯ ಕ್ರಮಾಂಕ 20:25:26:ಪಿಯುಬಿ 1, ದಿನಾಂಕ : 15.06.1957ರ ಅಧಿಸೂಚನೆಯಲ್ಲಿ ಪ್ರಸ್ತಾಪಿಸಲಾಗಿರುವ ನೆಗೋಷಿಯಬಲ್ ಇನ್ಸ್ಟ್ರುಮೆಂಟ್ ಆಕ್ಟ್ 1881ರ (1881ರ ಅಧಿನಿಯಮ ಸಂಖ್ಯೆ:26) 25ನೇ ಸೆಕ್ಷನ್ ನಲ್ಲಿರುವ ವಿವರಣೆಯಂತೆ 2026ನೇ ವರ್ಷದಲ್ಲಿ ಈ ಕೆಳಗಿನ ದಿನಗಳನ್ನು ಕರ್ನಾಟಕ ರಾಜ್ಯದಾದ್ಯಂತ ಸಾರ್ವತ್ರಿಕ ರಜೆಗಳೆಂದು ಘೋಷಿಸಲಾಗಿದೆ.

ಎಲ್ಲಾ ಎರಡನೇ ಶನಿವಾರ, ನಾಲ್ಕನೇ ಶನಿವಾರ ಮತ್ತು ಭಾನುವಾರಗಳು ಹಾಗೂ ಈ ಕೆಳಕಂಡ ದಿನಗಳು.

| ಕ್ರಮ ಸಂಖ್ಯೆ | ದಿನಾಂಕ | ವಾರಗಳು | ಸಾರ್ವತ್ರಿಕ ರಜಾ ದಿನಗಳು |
|---|---|---|---|
| 1 | 15.01.2026 | ಗುರುವಾರ | ಉತ್ತರಾಯಣ ಪುಣ್ಯಕಾಲ, ಮಕರ ಸಂಕ್ರಾಂತಿ |
| 2 | 26.01.2026 | ಸೋಮವಾರ | ಗಣರಾಜ್ಯೋತ್ಸವ |
| 3 | 19.03.2026 | ಗುರುವಾರ | ಯುಗಾದಿ ಹಬ್ಬ |
| 4 | 21.03.2026 | ಶನಿವಾರ | ಖುತುಬ್-ಎ-ರಂಜಾನ್ |
| 5 | 31.03.2026 | ಮಂಗಳವಾರ | ಮಹಾವೀರ ಜಯಂತಿ |
| 6 | 03.04.2026 | ಶುಕ್ರವಾರ | ಗುಡ್ ಫ್ರೈಡೆ |
| 7 | 14.04.2026 | ಮಂಗಳವಾರ | ಡಾ॥ ಬಿ.ಆರ್.ಅಂಬೇಡ್ಕರ್ ಜಯಂತಿ |
| 8 | 20.04.2026 | ಸೋಮವಾರ | ಬಸವ ಜಯಂತಿ, ಅಕ್ಷಯ ತೃತೀಯ |
| 9 | 01.05.2026 | ಶುಕ್ರವಾರ | ಕಾರ್ಮಿಕ ದಿನಾಚರಣೆ |
| 10 | 28.05.2026 | ಗುರುವಾರ | ಬಕ್ರೀದ್ |
| 11 | 26.06.2026 | ಶುಕ್ರವಾರ | ಮೊಹರಂ ಕಡೆ ದಿನ |
| 12 | 15.08.2026 | ಶನಿವಾರ | ಸ್ವಾತಂತ್ರ್ಯ ದಿನಾಚರಣೆ |
| 13 | 26.08.2026 | ಬುಧವಾರ | ಈದ್-ಮಿಲಾದ್ |
| 14 | 14.09.2026 | ಸೋಮವಾರ | ವರಸಿದ್ಧಿ ವಿನಾಯಕ ವ್ರತ |
| 15 | 02.10.2026 | ಶುಕ್ರವಾರ | ಗಾಂಧಿ ಜಯಂತಿ |
| 16 | 20.10.2026 | ಮಂಗಳವಾರ | ಮಹಾನವಮಿ, ಆಯುಧಪೂಜೆ |
| 17 | 21.10.2026 | ಬುಧವಾರ | ವಿಜಯದಶಮಿ |
| 18 | 10.11.2026 | ಮಂಗಳವಾರ | ಬಲಿಪಾಡ್ಯಮಿ, ದೀಪಾವಳಿ |
| 19 | 27.11.2026 | ಶುಕ್ರವಾರ | ಕನಕದಾಸ ಜಯಂತಿ |
| 20 | 25.12.2026 | ಶುಕ್ರವಾರ | ಕ್ರಿಸ್‌ಮಸ್ |

**ಸೂಚನೆ:**

1. ಈ ರಜಾ ಪಟ್ಟಿಯಲ್ಲಿ ಭಾನುವಾರಗಳಂದು ಬರುವ ಮಹಾ ಶಿವರಾತ್ರಿ (15.02.2026), ಮಹರ್ಷಿ ವಾಲ್ಮೀಕಿ ಜಯಂತಿ (25.10.2026), ಕನ್ನಡ ರಾಜ್ಯೋತ್ಸವ (01.11.2026) ಹಾಗೂ ನರಕ ಚತುರ್ದಶಿ (08.11.2026) & ಎರಡನೇ ಶನಿವಾರದಂದು ಬರುವ ಮಹಾಲಯ ಅಮವಾಸ್ಯೆ (10.10.2026) ಈ ರಜೆ ಪಟ್ಟಿಯಲ್ಲಿ ನಮೂದಿಸಿರುವುದಿಲ್ಲ.
2. ದಿನಾಂಕ : 01.04.2026 ವಾಣಿಜ್ಯ ಬ್ಯಾಂಕುಗಳ ಹಾಗೂ ಸಹಕಾರಿ ಬ್ಯಾಂಕುಗಳ ವಾರ್ಷಿಕ ಮುಕ್ತಾಯದ ದಿನ ಆಗಿರುವುದರಿಂದ, ಸದರಿ ದಿನದಂದು ವಾಣಿಜ್ಯ ಹಾಗೂ ಸಹಕಾರಿ ಬ್ಯಾಂಕುಗಳಿಗೆ ಮಾತ್ರ ರಜಾ ಇರುತ್ತದೆ.
3. ದಿನಾಂಕ : 03.09.2026 (ಗುರುವಾರ) ಕೈಲ್ ಮೂಹೂರ್ತ, ದಿನಾಂಕ : 18.10.2026 (ಭಾನುವಾರ) ತುಲಾ ಸಂಕ್ರಮಣ ಹಾಗೂ ದಿನಾಂಕ:26.11.2026 (ಗುರುವಾರ) ಹುತ್ತರಿ ಹಬ್ಬವನ್ನು ಆಚರಿಸಲು ಕೊಡಗು ಜಿಲ್ಲೆಗೆ ಮಾತ್ರ ಅನ್ವಯವಾಗುವಂತೆ ಸ್ಥಳೀಯ ಸಾರ್ವತ್ರಿಕ ರಜೆಯನ್ನು ಘೋಷಿಸಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ
ಸಹಿ/-
**(ಬಾಣದರಂಗಯ್ಯ ಎನ್.ಆರ್.)**
ಸರ್ಕಾರದ ಅಧೀನ ಕಾರ್ಯದರ್ಶಿ-1 (ಪ್ರ)
ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ,
(ರಾಜ್ಯ ಶಿಷ್ಟಾಚಾರ)

# ದಿ ಹುಬ್ಬಳ್ಳಿ ಅರ್ಬನ್ ಕೋ-ಆಪರೇಟಿವ್ ಬ್ಯಾಂಕಿನಿಂದ ಉಚಿತ ಆರೋಗ್ಯ ತಪಾಸಣೆ ಶಿಬಿರ



**ಹುಬ್ಬಳ್ಳಿ :** ದಿ ಹುಬ್ಬಳ್ಳಿ ಅರ್ಬನ ಕೋ–ಅಪರೇಟಿವ್ ಬ್ಯಾಂಕು ಉತ್ತರ ಕರ್ನಾಟಕದಲ್ಲಿ ಶತಮಾನ ಪೂರೈಸಿದ ಹೆಗ್ಗಳಿಕೆಯ ಬ್ಯಾಂಕು ಆಗಿದ್ದು, ಬ್ಯಾಂಕಿನ ಸದಸ್ಯರಿಗೆ, ಗ್ರಾಹಕರಿಗೆ ಹಾಗೂ ಬ್ಯಾಂಕಿನ ಸಿಬ್ಬಂದಿಗಳಿಗೆ ಸಂಜೀವಿನಿ ಸ್ಪೇಷಾಲಿಟಿ ಆಸ್ಪತ್ರೆ ಮತ್ತು ಹಾರ್ಟ್ ಕೇರ ಸೆಂಟರ್ ಇವರ ಸಹಯೋಗದೊಂದಿಗೆ ಉಚಿತ ಆರೋಗ್ಯ ತಪಾಸಣೆ ಕಾರ್ಯಕ್ರಮವನ್ನು ರವಿವಾರ ದಿನಾಂಕ : 16.11.2025 ರಂದು ಬೆಳಗ್ಗೆ 9.00 ಗಂಟೆಯಿಂದ 01.30 ಗಂಟೆಯವರೆಗೆ ಬ್ಯಾಂಕಿನ ಆವರಣದಲ್ಲಿ ಯಶಸ್ವಿಯಾಗಿ ನಡೆಸಲಾಯಿತು.

ಸಂಜೀವಿನಿ ಸ್ಪೇಷಾಲಿಟಿ ಆಸ್ಪತ್ರೆ ಮತ್ತು ಹಾರ್ಟ್ ಕೇರ ಸೆಂಟರ್ ಇದರ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಅಭಿಶೇಕ ಪಾಟೀಲ ಇವರು ಮಾತನಾಡಿ, ಕಾಲಕಾಲಕ್ಕೆ ಆರೋಗ್ಯ ತಪಾಸಣೆಯನ್ನು ಮಾಡಿಸುವುದರಿಂದ ಆರೊಗ್ಯದಲ್ಲಿ ಸಣ್ಣ ಪುಟ್ಟ ಸಮಸ್ಯೆಗಳಿಂದ ಪರಿಹಾರವನ್ನು ಕಂಡುಕೊಳ್ಳಬಹುದು ಹಾಗೂ ಮುಂದೆ ಬರುವ ದೊಡ್ಡ ಪ್ರಮಾಣದ ರೋಗಗಳನ್ನು ತಡೆಗಟ್ಟಬಹುದು. ಇಂತಹ ಕಾರ್ಯಕ್ರಮವನ್ನು ಯಶಸ್ವಿಯಾಗಿ ನಡೆಸಿದ್ದಕ್ಕೆ ಬ್ಯಾಂಕಿಗೆ ಧನ್ಯವಾದಗಳನ್ನು ತಿಳಿಸಿದರು.

ಬ್ಯಾಂಕಿನ ಅಧ್ಯಕ್ಷರಾದ ಶ್ರೀ ವಿಕ್ರಮ ಆರ್. ಸಿರೂರ ಇವರು ಪ್ರಾಸ್ತಾವಿಕವಾಗಿ ಮಾತನಾಡಿ ಆರೋಗ್ಯ ಸರಿ ಇದ್ದಲ್ಲಿ ಎಲ್ಲವೂ ಸರಿ ಇರುತ್ತದೆ, ಗ್ರಾಹಕರು ಇದರ ಸದುಪಯೋಗವನ್ನು ಪಡೆಸಿಕೊಳ್ಳಬೇಕೆಂದು ತಿಳಿಸಿದರು.

ಈ ಸಂದರ್ಭದಲ್ಲಿ ಬ್ಯಾಂಕಿನ ನಿರ್ದೇಶಕರುಗಳಾದ ಶ್ರೀ ಮಲ್ಲಿಕಾರ್ಜುನ ವ್ಹಿ ಸಾವಕಾರ, ಶ್ರೀ ಮಹೇಶ ಬಿ ಬುರಲಿ, ಶ್ರೀಮತಿ ಸ್ಮೃತಿ ಎಸ್. ಕೋರ್ಲಹಳ್ಳಿ, ಶ್ರೀ ಸದಾಶಿವ ಸಿ. ಕಾರಡಗಿ, ಶ್ರೀ ಬಸವರಾಜ ತೇರದಾಳ, ಶ್ರೀ ಚಂದ್ರಶೇಖರ ಎಮ್. ಕಮಡೊಳ್ಳಿ, ಶ್ರೀ ಕೃಷ್ಣಮೂರ್ತಿ ಆರ್. ಭಟ್, ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳಾದ ಶ್ರೀ ಪಂಚಾಕ್ಷರಿ ಬಿ. ಮಠಪತಿ, ಬ್ಯಾಂಕಿನ ಗ್ರಾಹಕರು, ಸದಸ್ಯರು ಹಾಗೂ ಸಿಬ್ಬಂದಿ ವರ್ಗದವರು ಹಾಜರಿದ್ದರು ಎಂದು ಬ್ಯಾಂಕಿನ ಅಧ್ಯಕ್ಷರಾದ ಶ್ರೀ ವಿಕ್ರಮ ಆರ್. ಸಿರೂರ ಇವರು ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.




## ನಿಮ್ಮ ಪ್ರಶ್ನೆ ನಮ್ಮ ಉತ್ತರ



▶▶ **ಸುಧಾಕರ್ ಭಟ್,** ಬ್ಯಾಂಕಿಂಗ್ ಸಲಹೆಗಾರರು.

**ನಮ್ಮ ಈ ಕೆಳಗಿನ ಪ್ರಶ್ನೆಗಳಿಗೆ ಉತ್ತರ ನೀಡಿ**

**– ಪಟ್ಟಣ ಸಹಕಾರ ಬ್ಯಾಂಕ್ ಲಿ., ಬಾಗಲಕೋಟೆ ಜಿಲ್ಲೆ.**

**01. ನಮ್ಮ ಬ್ಯಾಂಕಿನ ಸಹ ಭಾಗಿದಾರ ಸದಸ್ಯರಿಗೆ (ಅಸೋಸಿಯೇಟ್ ಮೆಂಬರ್) ಕನಿಷ್ಠ ಹಾಗೂ ಗರಿಷ್ಠ ಎಷ್ಟು ಸಾಲ ನೀಡಬಹುದು.**

**ಉತ್ತರ :** ಸಹ ಸದಸ್ಯರಿಗೆ ನೀಡುವ ಸಾಲಗಳ ಮೇಲೆ ಪ್ರತ್ಯೇಕ ಮಿತಿ ಇಲ್ಲ. ಸಾಮಾನ್ಯ ಸದಸ್ಯರಿಗೆ ನೀಡುವ ಸಾಲಗಳ ಮಿತಿ ಸಹ ಸದಸ್ಯರಿಗೂ ಅನ್ವಯವಾಗುತ್ತದೆ.

**02. ಸಹ ಭಾಗಿದಾರ ಸದಸ್ಯರು (ಅಸೋಸಿಯೇಟ್ ಮೆಂಬರ್) ಅವರು ತಮ್ಮ ಸಾಲ ಸಂದಾಯ ಮಾಡಿದ ತಕ್ಷಣವೇ ಅವರ ಷೇರು ಹಣವನ್ನೂ ಸಹ ಮುಕ್ತಾಯಗೊಳಿಸಿ ಮರಳಿ ಕೊಡಬಹುದೇ ಹೇಗೆ ಮತ್ತು ಬ್ಯಾಂಕಿಗೆ ಇದರಿಂದಾಗುವ ಪರಿಣಾಮಗಳೇನು ಎಂಬುದರ ಬಗ್ಗೆ. (ಸಿ.ಆರ್.ಎ.ಆರ್.ಗೆ ಸಂಬಂಧ ಪಡುವ ಬಗ್ಗೆ).**

**ಉತ್ತರ :** ಸಾಲ ಮರುಪಾವತಿಯಾದ ನಂತರ ಸಹಸದಸ್ಯರಿಂದ ಬೇಡಿಕೆ ಬಂದಲ್ಲಿ ಅವರ ಷೇರುಗಳನ್ನು ಮರುಪಾವತಿ ಮಾಡಬಹುದು. ಷೇರು ಮರುಪಾವತಿಸುವ ಮುನ್ನ ಕನಿಷ್ಠ ಸಿ.ಆರ್.ಎ.ಆರ್ ಅವಶ್ಯಕತೆಯನ್ನು ಗಮನದಲ್ಲಿರಿಸಿ.

**03. ಯಾವುದೇ ಗ್ರಾಹಕ ಬ್ಯಾಂಕಿನ ಸಹ ಸದಸ್ಯತ್ವ ಹೊಂದಲು ಬ್ಯಾಂಕಿನ ಸಾಮಾನ್ಯ ಸದಸ್ಯರ (ರೆಗ್ಯುಲರ್ ಮೆಂಬರ್) ಶಿಫಾರಸ್ಸು ಪಡೆಯುವುದು ಕಡ್ಡಾಯವೇ ಹೇಗೆ? ಮತ್ತು ಸಹ ಭಾಗಿದಾರ ಸದಸ್ಯರು (ಅಸೋಸಿಯೇಟ್ ಮೆಂಬರ್) ಬ್ಯಾಂಕಿನಲ್ಲಿ ಹೊಂದುವ ಜವಾಬ್ದಾರಿಗಳಿಗೆ ಶಿಫಾರಸ್ಸು ಮಾಡಿದ ಸಾಮಾನ್ಯ ಸದಸ್ಯರೂ (ರೆಗ್ಯುಲರ್ ಮೆಂಬರ್) ಸಹ ಹೊಣೆಗಾರರಾಗುತ್ತಾರೆಯೇ ಹೇಗೆ ಎಂಬುದರ ಬಗ್ಗೆ ಮಾಹಿತಿ ನೀಡಿ.**

**ಉತ್ತರ :** ಯಾವುದೇ ವ್ಯಕ್ತಿಯನ್ನು ಬ್ಯಾಂಕಿನ ಸಹ ಸದಸ್ಯನನ್ನಾಗಿ ಸೇರಿಸಿಕೊಳ್ಳಲು ಬ್ಯಾಂಕಿನ ಸಾಮಾನ್ಯ ಸದಸ್ಯನ ಶಿಫಾರಸ್ಸು ಪಡೆಯುವುದು ಕಡ್ಡಾಯವಲ್ಲ ಸಹ ಸದಸ್ಯರ ಸಾಲಗಳಿಗೆ ಜಾಮೀನು ಹಾಕಿದಲ್ಲಿ ಮಾತ್ರ ಸಾಮಾನ್ಯ ಸದಸ್ಯರು ಆ ಸಾಲ ಮರುಪಾವತಿಗೆ ಹೊಣೆಗಾರರಾಗುತ್ತಾರೆ.

**04. ನಾಮಮಾತ್ರ ಸದಸ್ಯರು (ನಾಮಿನಲ್ ಮೆಂಬರ್)ಗಳಿಗೆ ಕನಿಷ್ಠ ಹಾಗೂ ಗರಿಷ್ಠ ಎಷ್ಟು ಸಾಲ ನೀಡಬಹುದು?**

**ಉತ್ತರ :** ನಾಮಮಾತ್ರ ಸದಸ್ಯರಿಗೆ ನೀಡಬಹುದಾದ ಗರಿಷ್ಠ ಸಾಲವನ್ನು ನಿರ್ಧರಿಸಲು ದಿನಾಂಕ : ಏಪ್ರಿಲ್ 1, 2025ರ ರಿಜರ್ವ್ ಬ್ಯಾಂಕಿನ ಎಕ್ಸ್‌ಪೋಸರ್ ನಾರ್ಮ್ಸ್ ಸುತ್ತೋಲೆಯ ಪ್ಯಾರ 6.2 ರಿಂದ ನಿಮಗೆ ಮಾರ್ಗದರ್ಶನ ಸಿಗಬಹುದು.

# ಒನ್‌ಲೈನ್ ನ್ಯೂಸ್

ಈ ಪುಟದಲ್ಲಿನ ಸುದ್ದಿಗಳನ್ನು ಓದಿದ್ದೀರಾ...?
**ಕುತೂಹಲಕಾರಿಯಾದ ಸುದ್ದಿಗಳು** ನಿಮ್ಮ ಕಣ್ಣು ತಪ್ಪಿದ್ದರೆ, ಇಲ್ಲಿವೆ ಓದಿ.

- ಪಶ್ಚಿಮ ಬಂಗಾಳದ ವಿದ್ಯಾಸಾಗರ ವಿಶ್ವವಿದ್ಯಾಲಯವು 'ವಿದ್ಯಾಸಾಗರ ಪುರಸ್ಕಾರ'ವನ್ನು ಪ್ರತಿವರ್ಷ ಕಲೆ, ಸಾಹಿತ್ಯ, ಸಾಂಸ್ಕೃತಿಕ ಕ್ಷೇತ್ರಗಳ ಸಾಧಕರಿಗೇ ಹೆಚ್ಚಾಗಿ ಸಲ್ಲುತ್ತಿದ್ದ ಪ್ರಶಸ್ತಿಯು 2025ನೇ ಸಾಲಿನಲ್ಲಿ ಒಬ್ಬ ಐಎಎಸ್ ಅಂಥ ಅಧಿಕಾರಿಗೆ ಸಂದಿದೆ. ನೂರರಷ್ಟು ದೃಷ್ಟಿದೋಷ ಇರುವ ಐಎಎಸ್ ಅಧಿಕಾರಿ ನಮ್ಮ ಕನ್ನಡಿಗ ಕೆಂಪಹೊನ್ನಯ್ಯ. ಅವರು ಪಶ್ಚಿಮ ಬಂಗಾಳದ ಪಶ್ಚಿಮ ಮಿಡ್ನಾಪುರ ಜಿಲ್ಲೆಯಲ್ಲಿ ಹೆಚ್ಚುವರಿ ಜಿಲ್ಲಾಧಿಕಾರಿಯಾಗಿ ಕೈಗೊಂಡ ಅಭಿವೃದ್ಧಿ ಕಾರ್ಯಗಳು, ಯೋಜನೆಗಳಿಗಾಗಿ ಈ ಪ್ರಶಸ್ತಿಗೆ ಪಾತ್ರರಾಗಿದ್ದಾರೆ.
- ಬೆಂಗಳೂರಿನ ಖಾಸಗಿ ಸಂಸ್ಥೆಯಲ್ಲಿ ಎಂಜಿನಿಯರ್ ಆಗಿ ಸೇವೆ ಸಲ್ಲಿಸುತ್ತಿರುವ ಉಮಾಶಂಕರ್ ತಿ.ನರಸೀಪುರ ತಾಲೂಕಿನ ಬನ್ನೂರು ಹೋಬಳಿಯ ಬಸವನಹಳ್ಳಿಯವರು, ಶಿಕ್ಷಕರ ಹಿತವಚನಗಳನ್ನು ಕೇಳಿ ಎಂಜಿನಿಯರ್ ಆಗಿ ಜೀವನ ರೂಪಿಸಿಕೊಂಡವರು. ತಮ್ಮ ಪಾಠ ಕಲಿಸಿದ ಶ್ರೀನಿವಾಸಗೌಡ ಅವರು ನಿವೃತ್ತರಾದ ಹಿನ್ನೆಲೆಯಲ್ಲಿ ರೂ. 1.50 ಲಕ್ಷ ಮೌಲ್ಯದ ಎಲೆಕ್ಟ್ರಿಕಲ್ ಬೈಕ್ ಉಡುಗೊರೆಯಾಗಿ ನೀಡಿದರು.
- ಬಕ್ಸಾರ್ ನಿವಾಸಿ ಗೋಲು ಯಾದವ್ ರೈಲಿನಲ್ಲಿ ಭಿಕ್ಷೆ ಬೇಡುತ್ತಿದ್ದ ಅನಾಥ ಯುವತಿಯನ್ನು ರಕ್ಷಿಸಿ ಆಕೆಯನ್ನು ಕುಟುಂಬಸ್ಥರೊಂದಿಗೆ ಸೇರಿಸಿ ನಂತರ ತನ್ನ ಮತ್ತು ಆಕೆಯ ಕುಟುಂಬಸ್ಥರನ್ನು ಒಪ್ಪಿಸಿ ಆಕೆಯನ್ನೇ ಮದುವೆಯಾಗಿರುವ ಅತ್ಯಪರೂಪದ ಘಟನೆ ಬಿಹಾರದಲ್ಲಿ ನಡೆದಿದೆ.
- ಬೆಂಗಳೂರಿನ ಗಿರಿನಗರದ ಲಿಖಿತಾ ಅವರು ಸಾಕಿದ್ದ ರೂ.2 ಲಕ್ಷ ಬೆಲೆ ಬಾಳುವ ವಿದೇಶಿ ತಳಿಯ ಗಿಳಿಯೂ ಸಮೀಪದ ಹೈಟೆನ್ಷನ್ ವಿದ್ಯುತ್ ಕಂಬದ ಮೇಲೆ ಹಾರಿ ಹೋಗಿ ಕುಳಿತಿತ್ತು. ಅದರ ರಕ್ಷಣೆಗೆ ಹೋದ ನಾಗಮಂಗಲದ ಅರುಣ್ ಕುಮಾರ್ ವಿದ್ಯುತ್ ತಗಲಿ ಮೃತಪಟ್ಟಿದ್ದಾರೆ.
- ಉಡುಪಿಯಲ್ಲಿರುವ ರಾಜ್ಯ ಮಹಿಳಾ ನಿಲಯದ ಅನಾಥೆ ಸುಶೀಲಾ ಅವರ ವಿವಾಹವು ಹಾಸನ ಜಿಲ್ಲೆಯ ಹೊಳೆನರಸೀಪುರ ತಾಲ್ಲೂಕಿನ ಕೃಷ್ಣಾಪುರ ಗ್ರಾಮದ ಮಲ್ಲಪ್ಪ ಅವರ ಪುತ್ರ ನಾಗರಾಜ ಅವರೊಂದಿಗೂ, ಮತ್ತೊಬ್ಬ ಅನಾಥೆ ಮಲ್ಲೇಶ್ವರಿ ಅವರ ವಿವಾಹವು ದಕ್ಷಿಣ ಕನ್ನಡ ಜಿಲ್ಲೆಯ ಮೂಲ್ಕಿ ಬಪ್ಪನಾಡಿನ ಸತೀಶ್ ಪ್ರಭು ಅವರ ಪುತ್ರ ಸಂಜಯ ಪ್ರಭು ಅವರೊಂದಿಗೆ ನೆರವೇರಿತು. ಜಿಲ್ಲಾಧಿಕಾರಿ ಅವರು ಧಾರೆ ಎರೆದುಕೊಟ್ಟರೆ, ಡಿವೈಎಸ್ಪಿ ಮತ್ತಿತರರು ನಿಂತು ವಿವಾಹ ನೆರವೇರಿಸಿದರು.

## ಓದುಗರ ಅನಿಸಿಕೆ...



**ಇದುವೇ ಸಹಕಾರದ ಶಕ್ತಿ :** ನಮ್ಮ ರಾಜ್ಯದಲ್ಲಿ 249 ಪಟ್ಟಣ ಸಹಕಾರ ಬ್ಯಾಂಕುಗಳಿದ್ದು, 1122 ಶಾಖೆಗಳನ್ನು ಹೊಂದಿವೆ. ಇವುಗಳಲ್ಲಿ 8,632 ಉದ್ಯೋಗಿಗಳು ಕಾರ್ಯನಿರ್ವಹಿಸುತ್ತಿದ್ದರೆ, 23,27,413 ಸದಸ್ಯರಿದ್ದಾರೆ. ಒಟ್ಟಾರೆ 58,225 ಕೋಟಿ ರೂಪಾಯಿಗಳ ದುಡಿಯುವ ಬಂಡವಾಳ ಹೊಂದಿದ್ದು, ರೂ.481.74 ಕೋಟಿ ಲಾಭವನ್ನು ಮಾಡಿವೆ ಎಂದರೆ ಪಟ್ಟಣ ಸಹಕಾರ ಬ್ಯಾಂಕುಗಳ ಸಾಮರ್ಥ್ಯದ ಅರಿವಾಗುತ್ತದೆ. ಇದುವೇ ಸಹಕಾರದ ಶಕ್ತಿ.

▶▶ **ಸೂರ್ಯಪ್ರಕಾಶ್ ಜಿ.ಎಂ., ಬಳ್ಳಾರಿ**

**ಕೇಂದ್ರ ಸರ್ಕಾರ ಮೌನವಾಗಿದೆ! :** ಅಮೆರಿಕನ್ ಡಾಲರ್ ಎದುರು ರೂಪಾಯಿ ಮೌಲ್ಯವು ಸತತವಾಗಿ ಕುಸಿತ ಕಾಣುತ್ತಿದೆ. ದೇಶದ ಚಾಲ್ತಿ ಖಾತೆ ಕೊರತೆಯು ಪ್ರಸಕ್ತ ವರ್ಷದಲ್ಲಿ ಮತ್ತಷ್ಟು ಏರಿಕೆಯಾಗುವ ಸಾಧ್ಯತೆಯ ಹಿನ್ನೆಲೆಯಲ್ಲಿ ರೂಪಾಯಿ ಮೌಲ್ಯವು ಇನ್ನಷ್ಟು ದುರ್ಬಲಗೊಳ್ಳಲಿದೆ. ಹಾಗಾದಲ್ಲಿ ಮುಂದಿನ ದಿನಗಳಲ್ಲಿ ರೂಪಾಯಿ ಮೌಲ್ಯ ಮತಷ್ಟು ಕುಸಿಯುವ ಸಾಧ್ಯತೆಯಿದ್ದರೂ ಕೇಂದ್ರ ಸರ್ಕಾರ ಮೌನವಾಗಿದೆ!

▶▶ **ಪಿ.ಕೆ. ರವಿಂದ್ರನಾಥ್, ಬೆಂಗಳೂರು**

ಸಂಪಾದಕರು :
**ಪುಂಡಲೀಕ ಎನ್. ಕೇರೂರೆ,**
ಮುಖ್ಯಕಾರ್ಯನಿರ್ವಹಣಾಧಿಕಾರಿ,
ಕರ್ನಾಟಕ ರಾಜ್ಯ ಪಟ್ಟಣ ಸಹಕಾರ ಬ್ಯಾಂಕುಗಳ
ಮಹಾಮಂಡಳ ನಿ., ಬೆಂಗಳೂರು.

**ಇವರಿಗೆ,**

Edited, Published and printed by Pundalik N. Kerure, C.E.O. on behalf of the
Karnataka State Co-operative Urban Banks Federation Ltd., Bangalore - 560027.
Published at : # 132, K.H. Road, Bangalore - 560027.
Printed at : Navarathna Printers, #35, 3rd Cross, Sudhamanagar, Bangalore - 560027.